# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 708 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್ ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.12.2024 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ.ಸ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ಸಂಖ್ಯೆ ಎಷ್ಟು? ಸದರಿ ವಸತಿ ನಿಲಯಗಳಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?</td><td>ಸಮಾಜ ಕಲ್ಯಾಣ ಇಲಾಖಾ ವತಿಯಿಂದ 1215 ಡಾ|| ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಮತ್ತು 713 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಸೇರಿದಂತೆ ಒಟ್ಟಾರೆ 1928 ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದ್ದು, ವಿವರ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ವಿವರ</th><th>ನಿಲಯಗಳ ಸಂಖ್ಯೆ</th><th>ಮಂಜೂರಾತಿ</th><th>ದಾಖಲಾತಿ</th></tr>
<tr><td>1</td><td>ಮೆಟ್ರಿಕ್ ಪೂರ್ವ</td><td>1215</td><td>90194</td><td>101475</td></tr>
<tr><td>2</td><td>ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು</td><td>713</td><td>76447</td><td>118699</td></tr>
<tr><td></td><td>ಒಟ್ಟು</td><td>1928</td><td>166641</td><td>220174</td></tr>
</table></td></tr>
<tr><td>ಆ</td><td>ಮಾಸಿಕವಾಗಿ ಪ್ರತಿ ವಿದ್ಯಾರ್ಥಿಗೆ ಊಟಕ್ಕಾಗಿ ಸರ್ಕಾರ ಮಾಡುವ ವೆಚ್ಚವೆಷ್ಟು?</td><td>ಮಾಸಿಕವಾಗಿ ಸರ್ಕಾರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ನಿಲಯಾರ್ಥಿಗೆ ರೂ. 1650/- ಹಾಗೂ ಸರ್ಕಾರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ನಿಲಯಾರ್ಥಿಗೆ ರೂ. 1750/- ರಂತೆ ಊಟಕ್ಕಾಗಿ ವೆಚ್ಚ ಮಾಡಲಾಗುತ್ತದೆ.<br><br>ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ. 100/- ಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಸದರಿ ಹೆಚ್ಚುವರಿ ವೆಚ್ಚದಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಸಕಇ 287 ಪಕವಿ 2024, ದಿನಾಂಕ:28.211.2024ರಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ವಾರದಲ್ಲಿ 04 ದಿನ ತಲಾ ಒಂದು ಮೊಟ್ಟೆಯಂತೆ ಪ್ರತಿ ವಿದ್ಯಾರ್ಥಿಗಳಿಗೆ ವಿತರಿಸಲು ಆದೇಶಿಸಲಾಗಿದೆ.<br><br>ಮುಂದುವರೆದಂತೆ, ವಸತಿ ಶಾಲೆ/ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಮತ್ತು ಕ್ರೈಸ್ ವಸತಿ ಶಾಲೆ/ಕಾಲೇಜು ವಿದ್ಯಾರ್ಥಿಗಳಿಗೆ ಶೇಕಡ 25% ರಷ್ಟು</td></tr>
</table>

| | | |
|---|---|---|
| | | ವೆಚ್ಚದಲ್ಲಿ ಶೇಂಗಾ ಚಿಕ್ಕಿ, ಶೇಕಡ 75% ರಷ್ಟು ವೆಚ್ಚದಲ್ಲಿ ಪೌಷ್ಟಿಕಾಂಶದ ಪುಡಿಯನ್ನು ವಿತರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| ಇ | ಹಲವು ವಸತಿ ನಿಲಯಗಳಲ್ಲಿ ಕಳಪೆ ಮತ್ತು ಉಪಯೋಗಿಸಲಾಗದ ಸ್ಥಿತಿಯಲ್ಲಿರುವ ಆಹಾರವನ್ನು ವಿದ್ಯಾರ್ಥಿಗಳಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ರೀತಿಯ ಆಹಾರ ಪದಾರ್ಥಗಳನ್ನು ಪೂರೈಕೆ ಮಾಡಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು? | ಬಂದಿರುವುದಿಲ್ಲ.<br><br>ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡುವ ಕುರಿತು ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿದೆ. (ಸರ್ಕಾರದ ಆದೇಶ ಸಂಖ್ಯೆ: ಸಕಇ 97 ಪಕವಿ 2023 ದಿನಾಂಕ: 28-07-2023) |
| ಈ | ಮಕ್ಕಳಿಗೆ ಉತ್ತಮ ಗುಣಮಟ್ಟದ ಆಹಾರ ಪೂರೈಕೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? | ಈ ಹಿಂದೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಹಾಗೂ ವಸತಿ ಶಾಲೆಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ತಾಲ್ಲೂಕು ಮಟ್ಟದಲ್ಲಿ ಕರೆಯುತ್ತಿದ್ದ ಟೆಂಡರ್ ಅನ್ನು ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯಲು ಸರ್ಕಾರದ ಆದೇಶ ಸಂಖ್ಯೆ: ಸಕಇ 738 ಪಕವಿ 2024, ದಿನಾಂಕ: 30-10-2024ರಲ್ಲಿ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ. (ಆದೇಶದ ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ) |

**ಸಂಖ್ಯೆ:ಸಕಇ 878 ಪಕವಿ 2024**

**(ಡಾ. ಹೆಚ್.ಸಿ. ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಅನುಬಂಧ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಮಾಜ ಕಲ್ಯಾಣ ಇಲಾಖೆಯ ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಹಾಲಿ ಇರುವ ಟೆಂಡರ್ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಸಕಇ 97 ಪಕವಿ 2023, ದಿನಾಂಕ:28.07.2023.
2. ಸರ್ಕಾರದ ಆದೇಶ ಸಂಖ್ಯೆ:ಸಕಇ/ಎಂ.ಡಿ.ಎಸ್/425/2022, ದಿನಾಂಕ:14-03-2024.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:25-09-2024 ರಂದು ನಡೆದ ಸಭೆಯ ನಡವಳಿ.
4. ಆಯುಕ್ತರು, ಸಮಾಜ ಕಲ್ಯಾಣ ಲಾಖೆ ಇವರ ಏಕ ಕಡತ ಸಂಖ್ಯೆ: SWD/SCHC/SC/168/2024-DDE (1545151).

*****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ಅವಶ್ಯವಿರುವ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕುಗಳನ್ನು ಘಟಕವನ್ನಾಗಿಸಿ ಟೆಂಡರ್ ಕರೆಯಲು ವಿಸ್ತೃತ ಮಾರ್ಗಸೂಚಿಗಳ ಸಮೇತ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥಗಳನ್ನು ಪ್ರತಿ 2 ವರ್ಷಗಳಿಗೊಮ್ಮೆ ಜಿಲ್ಲಾ ಹಂತದಲ್ಲಿ ಜಿಲ್ಲೆಯನ್ನು ಘಟಕವನ್ನಾಗಿಸಿ ಟೆಂಡರ್ ಕರೆಯಲು ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಕ್ರಮ ಸಂಖ್ಯೆ (1) ಮತ್ತು (2) ರ ಆದೇಶಗಳ ಸಂಬಂಧ ಪದೇ-ಪದೇ ಈ ಕೆಳಕಂಡ ಅಂಶಗಳ ಸಂಬಂಧ ಸ್ಪಷ್ಟೀಕರಣ/ ದೂರುಗಳು ಸಲ್ಲಿಕೆಯಾಗುತ್ತಿರುವುದರಿಂದ, ದಿನಾಂಕ:25-09-2024 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸದರಿ ವಿಷಯದ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು.

1. ಆದೇಶದಲ್ಲಿ Freak Rate ಸಂಬಂಧ ದರಗಳನ್ನು ಬುಲೆಟಿನ್ ನಲ್ಲಿಯೇ ನಮೂದು ಮಾಡಲು ತಿಳಿಸಿದ್ದು, ಜಿಲ್ಲೆಗಳಲ್ಲಿ ನಮೂದು ಮಾಡದೇ ಇರುವುದು.
2. ಜಿಲ್ಲಾ ಹಂತದಲ್ಲಿ ಟೆಂಡರ್ ಕರೆಯುವಾಗ, "ಸ್ಥಳೀಯ ಟೆಂಡರು" ದಾರರ ಬಗ್ಗೆ ಸ್ಪಷ್ಟ ಪರಿಭಾಷೆ ಇಲ್ಲದೇ ಇರುವುದು.

---2

3. ಜಿಲ್ಲಾ ಹಂತದಲ್ಲಿ ಎಲ್-1 ಅನ್ನು ತಪ್ಪಾಗಿ ನಿರ್ಧರಿಸುತ್ತಿರುವ ಬಗ್ಗೆ ಪದೇ-ಪದೇ ಸರ್ಕಾರದಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೇಲ್ಮನವಿಗಳು ದಾಖಲಾಗುತ್ತಿರುವುದು.
4. ಕಾರ್ಯಾದೇಶ ಪಡೆದ ಟೆಂಡರುದಾರರು ಗುಣಮಟ್ಟ ಕಾಪಾಡದೇ ಇರುವುದು
5. ಕಾರ್ಯಾದೇಶ ಪಡೆದ ಟೆಂಡರುದಾರರು ನಿಯಮಿತವಾಗಿ ಸರಬರಾಜು ಮಾಡದೇ ಇರುವುದು.
6. ಟೆಂಡರ್ ಕರೆಯಲು ಯಾವುದೇ ಸ್ಪಷ್ಟ ವೇಳಾಪಟ್ಟಿಯನ್ನು ಪಾಲಿಸದೇ ಇರುವುದು ಹಾಗೂ ಟೆಂಡರ್ ಅವಧಿ ಮುಗಿದ ನಂತರದಲ್ಲೂ ವರ್ಷಾನುಗಟ್ಟಲೇ ಟೆಂಡರ್ ಕರೆಯದೇ ಹಿಂದಿನ ಗುತ್ತಿಗೆದಾರರನ್ನೇ ಮುಂದುವರೆಸುತ್ತಿರುವುದು.
7. ಎಲ್-1 ದಾರರಿಂದ ಕರಾರು ಪತ್ರ ಮಾಡಿಕೊಳ್ಳದೇ ಇರುವುದು.
8. ಟೆಂಡರ್ ಕರೆಯುವಾಗ ಒಂದೊಂದು ಜಿಲ್ಲೆಯಲ್ಲಿ ಒಂದೊಂದು Turn over ಷರತ್ತುಗಳನ್ನು ನಮೂದು ಮಾಡುತ್ತಿರುವುದು.
9. ಭಾಗವಹಿಸುವ ಟೆಂಡರುದಾರರ ಸಂಬಂಧ ಕನಿಷ್ಠ ಅನುಭವದ ಬಗ್ಗೆ ಸೂಕ್ತ ಮಾಹಿತಿ ಇಲ್ಲದೇ ಇರುವುದು ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ಮಾನದಂಡ ಇಲ್ಲದೇ ಇರುವುದು.

ಈ ಮೇಲ್ಕಂಡ ಅಂಶಗಳ ಬಗ್ಗೆ ಪದೇ ಪದೇ ಗೊಂದಲಗಳು ಉಂಟಾಗುತ್ತಿರುವುದರಿಂದ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ದಿನಾಂಕ:25-09-2024 ರಂದು ನಡೆದ ಸಭೆಯಲ್ಲಿ ಚರ್ಚಿಸಿ, ನಿರ್ಧರಿಸಿದಂತೆ, ಸದರಿ ಎಲ್ಲಾ ಅಂಶಗಳಿಗೆ ಸೂಕ್ತ ಸ್ಪಷ್ಟೀಕರಣ ನೀಡುವ ಸಂಬಂಧ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಸಮಾಜ ಕಲ್ಯಾಣ ಇಲಾಖೆಯ ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಈ ಹಿಂದೆ ಹೊರಡಿಸಲಾದ ಎಲ್ಲಾ ಆದೇಶಗಳನ್ನು ಹಾಗೂ ಸರ್ಕಾರದಿಂದ ನೀಡಲಾದ ಸ್ಪಷ್ಟೀಕರಣಗಳನ್ನು ಹಿಂಪಡೆಯಲು ಹಾಗೂ ಪರಿಷ್ಕರಿಸಿದ ಮಾರ್ಗಸೂಚಿಗಳನ್ನು ಹೊರಡಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಕಇ 738 ಪಕವಿ 2024, ಬೆಂಗಳೂರು</u>**
**<u>ದಿನಾಂಕ:30-10-2024.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಮಾಜ ಕಲ್ಯಾಣ ಇಲಾಖೆಯ ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು, 2024-25ನೇ ಸಾಲಿನಿಂದ ಜಿಲ್ಲಾ ಮಟ್ಟದಲ್ಲಿ ಪ್ರತಿ ಜಿಲ್ಲೆಯನ್ನು ಘಟಕವನ್ನಾಗಿಸಿ ಪ್ರತಿ 02 ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಟೆಂಡರ್ ಕರೆದು, ಸರಬರಾಜು ಆದೇಶ ನೀಡುವ ಸಂಬಂಧ ಈ ಆದೇಶದ ಅನುಬಂಧದಲ್ಲಿರುವಂತೆ ಮಾರ್ಗಸೂಚಿಯನ್ನು ಪರಿಷ್ಕರಿಸಿ ಆದೇಶಿಸಿದೆ.

--3

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 05 ಟಿಎಫ್‌ಪಿ 2024, ದಿನಾಂಕ: 07-10-2024 ರಲ್ಲಿ ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಹೊರಡಿಸಲಾಗಿದೆ. ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

30/10

(ಎಲ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಎಲ್ಲಾ ಜಿಲ್ಲೆಗಳ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
   **(ಕ್ರ.ಸಂ.4 & 6 ರವರೆಗೆ ಆಯುಕ್ತರು, ಸ.ಕ.ಇ ಇವರ ಮುಖೇನ)**
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.

*****

## ಸರ್ಕಾರದ ಆದೇಶ ಸಂಖ್ಯೆ:ಸಕಇ 738 ಪಕವಿ 2024 ಬೆಂಗಳೂರು ದಿನಾಂಕ:30-10-2024 ಕ್ಕೆ ಅನುಬಂಧ

ಭಾರತರತ್ನ ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು 2024-25 ನೇ ಸಾಲಿನಿಂದ ಜಿಲ್ಲಾ ಮಟ್ಟದಲ್ಲಿ **ಪ್ರತಿ ಜಿಲ್ಲೆಯನ್ನು ಘಟಕವನ್ನಾಗಿಸಿ, ಪ್ರತಿ 02 ವರ್ಷಗಳಿಗೊಮ್ಮೆ ಟೆಂಡರ್ ಕರೆಯಲು ಮಾರ್ಗಸೂಚಿಯನ್ನು** ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

### 1. ಜಿಲ್ಲಾಮಟ್ಟದ ಆಹಾರ ಪದಾರ್ಥಗಳ ಖರೀದಿ ಸಮಿತಿ.

| | | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾಪಂಚಾಯತ್ ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | ಸದಸ್ಯರು |
| 3 | ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | ಸದಸ್ಯರು |
| 4 | ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್ | ಸದಸ್ಯರು |
| 5 | ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿ |

### 2. ಟೆಂಡರ್ ಪ್ರಾಧಿಕಾರ

| | | |
|---|---|---|
| 1 | ಟೆಂಡರ್ ಕರೆಯುವ ಪ್ರಾಧಿಕಾರ | ಜಂಟಿ /ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ |
| 2 | ಟೆಂಡರ್ ಅಂಗೀಕಾರ ಪ್ರಾಧಿಕಾರ | ಜಿಲ್ಲಾಧಿಕಾರಿಗಳು |
| 3 | ಟೆಂಡರ್ ಮೇಲ್ಮನವಿ ಪ್ರಾಧಿಕಾರ | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ |

### 3. ಪದಾರ್ಥಗಳ ವರ್ಗೀಕರಣ:

ಹಾಲಿ ಇರುವ ಗುಂಪುಗಳನ್ನು ಈ ಕೆಳಗಿನಂತೆ ವರ್ಗೀಕರಣ ಮಾಡುವುದು ಸೂಕ್ತವಾಗಿರುತ್ತದೆ:

| | | |
|---|---|---|
| 1 | ಗ್ರೂಪ್-ಎ ಪದಾರ್ಥಗಳು | ಅಕ್ಕಿ, ರಾಗಿ, ಜೋಳ, ಗೋಧಿ, ಬನ್ಸಿ ರವೆ, ಸಣ್ಣ ರವೆ, ಅವಲಕ್ಕಿ, ಬೆಲ್ಲ, ಸಕ್ಕರೆ, ಧನಿಯ ಒಣಮೆಣಸಿನಕಾಯಿ ಗುಂಟೂರು, ಒಣಮೆಣಸಿನಕಾಯಿ ಬ್ಯಾಡಗಿ, ಹುಣಸೇ ಹಣ್ಣು, ಪುಡಿ ಉಪ್ಪು, ಕಲ್ಲುಪ್ಪು, ಅಡುಗೆ ಎಣ್ಣೆ, ಒಣಕೊಬ್ಬರಿ, ತೊಗರಿಬೇಳೆ, ಕಡಲೇ ಬೇಳೆ, ಉದ್ದಿನ ಬೇಳೆ, ಅವರೇ ಬೇಳೆ, ಹೆಸರು ಬೇಳೇ, ಹೆಸರುಕಾಳು, ಅಲಸಂಧಿಕಾಳು, ಹುರಳಿಕಾಳು, ಅವರೇಕಾಳು, ಬಟಾಣಿ, ಕಡಲೇಕಾಳು, ಕಡಲೇಬೀಜ, ಮೈದಾ, ಇಡ್ಲಿರವೆ, ಕಾಫಿ ಪುಡಿ, ಟೀ ಪುಡಿ, ಬಾದಾಮಿ ಪುಡಿ, ಹುರಿಗಡಲೆ, ಸೋಯಾಬೀನ್, ಕಡಲೇ ಪುರಿ, ಶಾವಿಗೆ, ಜಾಮೂನ್ |

| | | |
|---|---|---|
| | | ಮಿಕ್ಸ್, ಬಿಸಿಬೇಳೆ ಬಾತ್ ಪುಡಿ, ಪುಳಿಯೋಗರೆ ಪುಡಿ, ವಾಂಗಿಬಾತ್ ಪುಡಿ, ಹಪ್ಪಳ, ಅಡುಗೆ ಸೋಡಾ, ಸಬ್ಬಕ್ಕಿ, HORLICKS, BOURNVITA, ಕಾಬೂಲ್ ಕಡಲೆ, ಕಡಲೇ ಹಿಟ್ಟು, ಅಕ್ಕಿ ಹಿಟ್ಟು, ಬಿಸ್ಕಟ್ ಹಾಗೂ ಇತರೆ ದಿನಸಿ ಸಾಮಾಗ್ರಿಗಳು, ಹಾಗೂ ಸಿರಿಧಾನ್ಯಗಳಾದ ರಾಗಿ, ಸಾಮೆ, ನವಣೆ, ಹಾರಕ, ಊದಲು, ಬರಗು, ಸಜ್ಜೆ ಇತ್ಯಾದಿ (ಸಿರಿಧಾನ್ಯ ಪುಡಿ, ಸಿರಿಧಾನ್ಯ Instant Powder ಗಳನ್ನೂ ಸಹ ಒಳಗೊಂಡಂತೆ) |
| 2 | ಗ್ರೂಪ್-ಬಿ ಪದಾರ್ಥಗಳು | ಗೋಡಂಬಿ, ಒಣ ದ್ರಾಕ್ಷಿ, ಬಾದಾಮಿ, ಚಕ್ಕೆ, ಲವಂಗ, ಗಸ ಗಸೆ, ಮೆಂತ್ಯ, ಏಲಕ್ಕಿ, ಕರಿಮೆಣಸು, ಸಾಸಿವೆ, ಜೀರಿಗೆ ಅರಶಿನ ಪುಡಿ, ಇಂಗು ಬಿಳಿ ಎಳ್ಳು, ಉಪ್ಪಿನ ಕಾಯಿ, ಮರಾಠಿ ಮೊಗ್ಗು, ಪಲಾವು ಎಲೆ ಹಾಗೂ ಇತರೆ ಎಲ್ಲಾ ಮಸಾಲ ಪದಾರ್ಥಗಳು. |
| 3 | ಗ್ರೂಪ್-ಸಿ ಪದಾರ್ಥಗಳು | ಹುರಳಿಕಾಯಿ, ಆಲೂಗಡ್ಡೆ, ಬೆಂಡೇಕಾಯಿ, ಟಮೋಟೊ, ಬದನೆಕಾಯಿ, ಕ್ಯಾರೆಟ್, ಬೀಟ್ರೋಟ್, ಕೋಸು, ಮೂಲಂಗಿ ಹಸಿಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಕರಿಬೇವು, ಪುದೀನ, ಈರುಳ್ಳಿ, ಬೆಳ್ಳುಳ್ಳಿ, ಬಾಳೆಹಣ್ಣು, ಹೀರೇಕಾಯಿ, ತೊಂಡೆಕಾಯಿ, ನುಗ್ಗೇಕಾಯಿ, ಹಸಿಶುಂಠಿ, ಗೋರಿಕಾಯಿ, ಸಿಹಿ ಕುಂಬಳ, ಸೌತೆಕಾಯಿ, ಸಾಂಬಾರು ಸೌತೇಕಾಯಿ, ಎಲ್ಲಾ ರೀತಿಯ ಸೊಪ್ಪು, ದಪ್ಪಮೆಣಸಿನಕಾಯಿ, ನಿಂಬೆಹಣ್ಣು, ತೆಂಗಿನಕಾಯಿ ಹಾಗೂ ಇತರೆ ತರಕಾರಿಗಳು. |
| 4 | ಗ್ರೂಪ್-ಡಿ ಪದಾರ್ಥಗಳು | ಹಾಲು, ಮೊಸರು, ಶುದ್ಧ ಹಸುವಿನ ತುಪ್ಪ, ಬಿಸ್ಕತ್, ಬ್ರೆಡ್ ಮತ್ತು ಇತರೆ ಸಿಹಿ ತಿನಿಸುಗಳು |
| 5 | ಗ್ರೂಪ್-ಇ ಪದಾರ್ಥಗಳು | ಕೋಳಿ ಮೊಟ್ಟೆ, ಕೋಳಿ ಮಾಂಸ. |
| 6 | ಗ್ರೂಪ್-ಎಫ್ ಪದಾರ್ಥಗಳು | ಮೀನು ಮತ್ತು Sea Food |
| 7 | ಗ್ರೂಪ್-ಜಿ ಪದಾರ್ಥಗಳು | LPG and LPG Transportation Charges and other items related to LPG. |
| 8 | ಗ್ರೂಪ್-ಹೆಚ್ ಪದಾರ್ಥಗಳು | MILLING CHARGES, RICE/WHEAT TRANSPORTATION CHARGES, GAS TRANSPORTATION CHARGES. |
| 9 | ಗ್ರೂಪ್-ಐ ಪದಾರ್ಥಗಳು | ಅ)ಫೆನಾಯಿಲ್, ಆಸಿಡ್, ಬ್ಲೀಚಿಂಗ್ ಪೌಡರ್, ಸಬೀನಾ ಪೌಡರ್, HARPIC/DOMEX, MOP, BATHROOM BRUSH, TOILET BRUSH, DETERGENT POWDER, HANDWASH, DUSTBIN COVERS,WIPERS, VIM/PRIL/EXO,<br>ಕಡ್ಡಿ ಪೊರಕೆ, ಬಾಂಬೆ ಪೊರಕೆ, Plastic Bucket, Jug Dust Pan ಸಾಮಗ್ರಿಗಳು. Dust Bin- Plastic,<br>ಆ) ಟ್ಯೂಬ್ ಲೈಟ್ ಸೆಟ್, CFL ಬಲ್ಬ್ ಟ್ಯೂಬ್ ಲೈಟ್ ಬಲ್ಬ್. |

4. **ಟೆಂಡರ್ ಕರೆಯುಲು ವೇಳಾಪಟ್ಟಿ:-**

ಮೇಲೆ ತಿಳಿಸಿರುವ ಗ್ರೂಪ್‌ಗಳಂತೆ ಆಹಾರ ಸಾಮಗ್ರಿಗಳನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಸರಬರಾಜು ಮಾಡಲು ಜಿಲ್ಲಾ ಮಟ್ಟದಲ್ಲಿ ಪ್ರತಿ ಜಿಲ್ಲೆಯನ್ನು ಘಟಕವನ್ನಾಗಿ ಪರಿಗಣಿಸಿ ಈ ಕೆಳಕಂಡ ವೇಳಾಪಟ್ಟಿಯಂತೆ ಟೆಂಡರ್ ಕರೆಯುವುದು.

| ಕ್ರ. ಸಂ | ಪ್ರಕ್ರಿಯೆ | ವೇಳಾಪಟ್ಟಿ |
|---|---|---|
| 1 | E Portal ಮೂಲಕ ಅಧಿಸೂಚನೆ ಹೊರಡಿಸುವುದು | 1 ನೇ ಜನವರಿ- ಪ್ರತಿ 2 ವರ್ಷಕ್ಕೊಮ್ಮೆ |
| 2 | E Portal ಮೂಲಕ ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಪ್ರಾರಂಭಿಸುವ ದಿನಾಂಕ | 1 ನೇ ಜನವರಿ- ಪ್ರತಿ 2 ವರ್ಷಕ್ಕೊಮ್ಮೆ |
| 3 | E Portal ಮೂಲಕ ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಕೊನೆಯ ದಿನಾಂಕ | 31 ನೇ ಜನವರಿ |
| 4 | ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ | 1 ನೇ ಫೆಬ್ರುವರಿ |
| 5 | ತಾಂತ್ರಿಕ ಬಿಡ್ ನಲ್ಲಿ ಅರ್ಹತೆ ಹೊಂದಿದ ಸಂಸ್ಥೆಯಿಂದ ಆಹಾರ ಪದಾರ್ಥಗಳ ಮಾದರಿಗಳನ್ನು ಪಡೆಯುವ ದಿನಾಂಕ | 15 ನೇ ಫೆಬ್ರುವರಿ |
| 6 | ಆರ್ಥಿಕ ಬಿಡ್ ಗಳನ್ನು ತೆರೆಯುವ ದಿನಾಂಕ | 17 ನೇ ಫೆಬ್ರುವರಿ |
| 7 | ಟೆಂಡರ್ ಪ್ರಕ್ರಿಯೆಯಲ್ಲಿ ಅಂತಿಮಗೊಂಡ ಪ್ರಸ್ತಾವನೆಯನ್ನು ಟೆಂಡರ್ ಅನುಮೋದನಾ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಅವಧಿ | 20 ನೇ ಫೆಬ್ರುವರಿ |
| 8 | ಆಯ್ಕೆಗೊಂಡವರಿಗೆ ಕಾರ್ಯಾದೇಶ ಹೊರಡಿಸುವ ಅವಧಿ | ಮಾರ್ಚ 10 ರೊಳಗೆ |
| (ವಿ.ಸೂ. ಸದರಿ ದಿನಾಂಕಗಳಂದು ಸರ್ಕಾರಿ ರಜಾ ದಿನಗಳು ಬಂದಲ್ಲಿ, ಮುಂದಿನ ದಿನವನ್ನು ಪರಿಗಣಿಸತಕ್ಕದ್ದು). | | |

5. **ಸಾಮಾನ್ಯ ಷರತ್ತುಗಳು:-**

| | |
|---|---|
| 1 | ಇಲಾಖೆಯು ಈ ಸಂಬಂಧ HMIS ತಂತ್ರಾಂಶದಲ್ಲಿಯೇ ಪ್ರತ್ಯೇಕ Module ಅನ್ನು ರೂಪಿಸಿ, ಸಂಪೂರ್ಣ ಆಹಾರ ಸರಬರಾಜು ಪದ್ಧತಿಯ ಹಂತಗಳನ್ನು Online ನಲ್ಲಿ ದಾಖಲಿಸುವಂತೆ ಕ್ರಮವಹಿಸುವುದು (ಮಾಹೆಯಾನ ಆಹಾರ ಪದಾರ್ಥಗಳ ಬೇಡಿಕೆ ಸಲ್ಲಿಸುವುದರಿಂದ ಹಿಡಿದು, ವಿತರಣೆ ಮಾಡುವ ವರೆಗೂ ಎಲ್ಲಾ ಹಂತಗಳನ್ನು) |
| 2 | ಪ್ರತಿ ಮಾಹೆ, Online ಮೂಲಕವೇ Random ಆಗಿ 10 ನಿಲಯಗಳನ್ನು ಆಯ್ಕೆ ಮಾಡಿ, Samples ಗಳನ್ನು Lab Test ಗಾಗಿ ನಿಗದಿಪಡಿಸಿದ ಸಂಸ್ಥೆಗೆ ಸಲ್ಲಿಸಿ ವರದಿ ಪಡೆದು ಮುಂದಿನ ಕ್ರಮವಹಿಸುವುದು. |
| 3 | ಅಕ್ಕಿ ಮತ್ತು ಗೋಧಿಯನ್ನು ಭಾರತ ಸರ್ಕಾರದಿಂದ ಭಾರತೀಯ ಆಹಾರ ನಿಗಮದ ಮೂಲಕ ಎಲ್ಲಾ ವಿದ್ಯಾರ್ಥಿನಿಲಯಗಳು ಹಾಗೂ ವಸತಿ ನಿಲಯಗಳಿಗೆ ಹಂಚಿಕೆ ಮಾಡಲಾಗುತ್ತದೆ ಮತ್ತು ಇದನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದರಿಂದ ಆಹಾರ ಪದಾರ್ಥಗಳ ಖರ್ಚು ಕಡಿಮೆಯಾಗುತ್ತದೆ. ಒಂದು ವೇಳೆ ಇಂತಹ ಅಕ್ಕಿ ಮತ್ತು ಗೋಧಿ ನಿಗಮದಿಂದ ಸರಬರಾಜು ಮಾಡುವಲ್ಲಿ ಕೊರತೆಯಾದಲ್ಲಿ ಮಾತ್ರ ಜಿಲ್ಲಾ ಮಟ್ಟದ ಜಂಟಿ / ಉಪನಿರ್ದೇಶಕರ ಅನುಮೋದನೆಯೊಂದಿಗೆ ಮಾತ್ರ ಟೆಂಡರ್ ದಾರರಿಂದ ಖರೀದಿಸುವುದು. |

| | |
|---|---|
| 4 | ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವುದು ಮತ್ತು ವಿದ್ಯಾರ್ಥಿನಿಲಯಗಳು ಸರಿಯಾಗಿ ಕಾರ್ಯನಿರ್ವಹಿಸುವುದನ್ನು ನೋಡಿಕೊಳ್ಳುವುದು ಜಿಲ್ಲಾ ಮಟ್ಟದ ಸಮಿತಿಯ ಜವಾಬ್ದಾರಿಯಾಗಿರುತ್ತದೆ. |
| 5 | ಜಿಲ್ಲಾ ಮಟ್ಟದ ಸಮಿತಿಯು ಮಾದರಿಯ ಟೆಂಡರ್ ದಸ್ತಾವೇಜು/ಫಾರಂಗಳನ್ನು ಟೆಂಡರ್ ಕರೆಯಲು ಉಪಯೋಗಿಸುವುದು ಮತ್ತು ಅವಶ್ಯಕತೆಗೆ ಅನುಗುಣವಾಗಿ ಷರತ್ತುಗಳನ್ನು ವಿಧಿಸುವುದು |
| 6 | ಜಿಲ್ಲಾ ಮಟ್ಟದ ಸಮಿತಿಯು ಟೆಂಡರ್ ದರಗಳನ್ನು ಪರಿಶೀಲಿಸಿ, ಅರ್ಹ ಎಲ್-1 ಬಿಡ್‌ದಾರರಿಗೆ ಕಾರ್ಯಾದೇಶ ನೀಡುವುದು. |
| 7 | ಟೆಂಡರ್ ಅಂತಿಮಗೊಳಿಸಿದ ನಂತರ ಟೆಂಡರ್‌ದಾರರು ಮತ್ತು ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳ ಮಧ್ಯ ಲಿಖಿತ ರೂಪದಲ್ಲಿ ಕರಾರು ಮಾಡಿಕೊಳ್ಳುವುದು, ಸದರಿ ಕರಾರಿನಲ್ಲಿ ಒಪ್ಪಿರುವ ಗುಣಮಟ್ಟ ಮತ್ತು ದರಗಳಂತೆ ನಿಗಧಿತ ಅವಧಿಯೊಳಗೆ ಸರಬರಾಜು ಮಾಡುವುದು. |
| 8 | ಸರಬರಾಜುದಾರರು ಕಾರ್ಯಾದೇಶದಂತೆ ಪ್ರತಿ ಮಾಹೆ ನಿಲಯಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವ ಪೂರ್ವದಲ್ಲಿ ಕಡ್ಡಾಯವಾಗಿ ಸರಬರಾಜು ಮಾಡುವ ಎಲ್ಲಾ ಸಾಮಗ್ರಿಗಳ Samples ಗಳ ಒಂದು ಸೆಟ್ಟನ್ನು ಜಿಲ್ಲಾ ಮಟ್ಟದ ಜಂಟಿ/ಉಪನಿರ್ದೇಶಕರ ಕಛೇರಿಗೆ ಹಾಗೂ ಮತ್ತೊಂದು ಸೆಟ್ ಅನ್ನು ತಾಲ್ಲೂಕು ಮಟ್ಟದ ಸಹಾಯಕ ನಿರ್ದೇಶಕರ ಕಛೇರಿಗೆ ನೀಡಬೇಕಾಗಿರುತ್ತದೆ. ಸದರಿ Samples ಗಳನ್ನು ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಕಚೇರಿಯಲ್ಲಿ ಮಾಹೆಯಾನ ಸಂರಕ್ಷಿಸಿಡಬೇಕಾಗಿರುತ್ತದೆ. ಒಂದು ವೇಳೆ ಯಾವುದಾದರೂ ನಿಲಯದಲ್ಲಿ ಕಲುಷಿತ ಆಹಾರದ ಪ್ರಕರಣಗಳು ಕಂಡು ಬಂದಲ್ಲಿ ಕೂಡಲೇ ಆ ಮಾಹೆಯ Samples ಗಳನ್ನು ಪರೀಕ್ಷೆಗೆ ಕಳುಹಿಸಲು ಕ್ರಮವಹಿಸುವುದು. |
| 9 | ಆಹಾರ ಸಾಮಗ್ರಿಗಳನ್ನು ಕನಿಷ್ಠ ಪ್ರಮಾಣದ ಅಳತೆಯ ಪ್ಯಾಕೆಟ್ ಗಳಲ್ಲಿ ಸರಬರಾಜು ಮಾಡುವುದು. |
| 10 | ಸರಬರಾಜು ಮಾಡುವ ಸಂದರ್ಭದಲ್ಲಿ ಒದಗಿಸಿರುವ ಮಾದರಿಗನುಗುಣವಾಗಿ ಆಹಾರ ಪದಾರ್ಥಗಳ ಗುಣಮಟ್ಟವನ್ನು ಅಯಾ ವಿದ್ಯಾರ್ಥಿನಿಲಯದ ವಾರ್ಡನ್ ಹಾಗೂ ವಸತಿ ಶಾಲೆಯ ಮುಖ್ಯ ಶಿಕ್ಷಕರು ಖಾತ್ರಿಪಡಿಸಿಕೊಳ್ಳುವುದು. |
| 11 | ಒಂದು ವೇಳೆ ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಿದ ಯಾವುದೇ ಆಹಾರ ಪದಾರ್ಥಗಳ ಗುಣಮಟ್ಟ ಸರಿಯಿಲ್ಲವೆಂದು ಕಂಡುಬಂದಲ್ಲಿ ಅಂತಹ ಆಹಾರ ಪದಾರ್ಥಗಳನ್ನು ಕೂಡಲೇ ಆಯಾ ವಿದ್ಯಾರ್ಥಿನಿಲಯ/ವಸತಿ ಶಾಲೆಗಳಿಗೆ 3 ದಿನಗಳೊಳಗಾಗಿ ಬದಲಾಯಿಸಿಕೊಡಲು ಸರಬರಾಜುದಾರರು ಜವಾಬ್ದಾರರಾಗಿರುತ್ತಾರೆ. |
| 12 | ತಾಲ್ಲೂಕಿನ ಎಲ್ಲಾ ವಿದ್ಯಾರ್ಥಿನಿಲಯ/ವಸತಿ ಶಾಲೆಗಳಿಗೆ ಸಂಬಂಧಿಸಿದ ಬೇಡಿಕೆ ಪಟ್ಟಿಯನ್ನು ತಾಲ್ಲೂಕು ಮಟ್ಟದ ಅಧಿಕಾರಿ ಕ್ರೋಢೀಕರಿಸಿ ಅಂಗೀಕೃತ ಸರಬರಾಜುದಾರರಿಗೆ ಪ್ರತಿ ಮಾಹೆ 25ನೇ ತಾರೀಖಿನೊಳಗೆ ಬೇಡಿಕೆ ಪಟ್ಟಿಯನ್ನು (ಇಂಡೆಂಟ್) ನೀಡುವುದು, ಈ ರೀತಿ ಇಂಡೆಂಟ್ ಪಡೆದ ದಿನಾಂಕದಿಂದ 7 ದಿನಗಳ ಒಳಗಾಗಿ ಸರಬರಾಜುದಾರರು ಆಹಾರ ಪದಾರ್ಥಗಳನ್ನು ಸಂಬಂಧಪಟ್ಟ ವಿದ್ಯಾರ್ಥಿನಿಲಯಗಳ/ವಸತಿ ಶಾಲೆಗಳಿಗೆ ಸರಬರಾಜು ಮಾಡುವುದು. |
| 13 | ಒಂದು ವೇಳೆ ನಿಗದಿತ ಸಮಯದೊಳಗೆ ಸರಬರಾಜು ಮಾಡದೇ ಇದ್ದಲ್ಲಿ, ಪ್ರತಿ ದಿನಕ್ಕೆ ಮಾಸಿಕ ಒಟ್ಟು ಮೊತ್ತದ ಶೇ.0.5 ರಷ್ಟು ದಂಡ ವಿಧಿಸುವುದು. ದಂಡದ ಮೊತ್ತ ಶೇ 2 ರಷ್ಟನ್ನು ಮೀರಿದಲ್ಲಿ ಟೆಂಡರ್ ಅದೇಶವನ್ನು ರದ್ದುಪಡಿಸುವುದು. ಇದಕ್ಕೆ ಸರಬರಾಜುದಾರರೇ ಜವಾಬ್ದಾರರಾಗಿರುತ್ತಾರೆ. |
| 14 | ಗುತ್ತಿಗೆದಾರರು ಅನುಮೋದಿತ ಗುಣಮಟ್ಟದ ಆಹಾರ ಪದಾರ್ಥಗಳನ್ನು |

| | |
|---|---|
| | ಸರಬರಾಜು ಮಾಡುತ್ತಿರುವ ಬಗ್ಗೆ ಮತ್ತು ವಿದ್ಯಾರ್ಥಿನಿಲಯಗಳ ವಾರ್ಡನ್/ಶಿಕ್ಷಕರು, ಆಹಾರ ಪದಾರ್ಥಗಳನ್ನು ನಿಗದಿತ ಪ್ರಮಾಣದಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಬಗ್ಗೆ ಸಂಬಂಧಪಟ್ಟ ಕಂದಾಯ ಉಪವಿಭಾಗದ ಸಹಾಯಕ ಆಯುಕ್ತರು, ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ತಾಲ್ಲೂಕಿನ ತಹಸೀಲ್ದಾರ್ ರವರು ಕಾಲಾಕಾಲಕ್ಕೆ ವಿದ್ಯಾರ್ಥಿ ನಿಲಯ/ವಸತಿ ಶಾಲೆಗಳಿಗೆ ಭೇಟಿ ನೀಡಿ ಜಿಲ್ಲಾ ಮಟ್ಟದ ಸಮಿತಿಗೆ ಹಾಗೂ ಸರ್ಕಾರಕ್ಕೆ ವರದಿ ಸಲ್ಲಿಸುವುದು. |

**6. <u>ಟೆಂಡರಿನಲ್ಲಿ ಭಾಗವಹಿಸಲು ಬಿಡ್‌ದಾರರ ಅರ್ಹತೆಗೆ ಸಂಬಂಧಿಸಿದಂತೆ ನಿಗದಿಪಡಿಸಬೇಕಾದ ಕನಿಷ್ಠ ಮಾನದಂಡಗಳು</u>**

A. ಟೆಂಡರುದಾರರು ಕನಿಷ್ಠ 03(**ಮೂರು**) ವರ್ಷಗಳಿಗಿಂತ ಹೆಚ್ಚು ಅವಧಿಗೆ ಸರ್ಕಾರಿ, ಅರೆ ಸರ್ಕಾರಿ, ಸ್ವಾಯತ್ತ ಸಂಸ್ಥೆಗಳಿಗೆ ಆಹಾರ ಪದಾರ್ಥಗಳ ಚಟುವಟಿಕೆಯಲ್ಲಿ ತೊಡಗಿರಬೇಕು.

B. **ಸ್ಥಳೀಯ ವಹಿವಾಟುದಾರರಾಗುವ ಸಂಬಂಧ ಟೆಂಡರ್ ಆಹ್ವಾನಿಸಿದ ಜಿಲ್ಲೆಯಲ್ಲಿ ಕಡ್ಡಾಯವಾಗಿ GST ಅಡಿ ನೊಂದಾಯಿತ ಶಾಖಾ ಕಛೇರಿ / ಶಾಖಾ ಕೇಂದ್ರ ಹೊಂದಿರಬೇಕು ಹಾಗೂ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯಿಂದ ವಾಣಿಜ್ಯ ಪರವಾನಗಿ ಹೊಂದಿರಬೇಕು. ಅಂತಹ ಟೆಂಡರುದಾರರನ್ನು ಮಾತ್ರ ಸ್ಥಳೀಯ ಟೆಂಡರುದಾರರು ಎಂದು ಪರಿಗಣಿಸಲಾಗುವುದು.**

**C. ಟೆಂಡರ್ ಸಲ್ಲಿಸುವ ಪೂರ್ವದಲ್ಲಿ ಟೆಂಡರಿಗಿಟ್ಟ ಎಲ್ಲಾ ಸಾಮಗ್ರಿಗಳ Samples ಗಳನ್ನು ಜಿಲ್ಲಾ ಮಟ್ಟದ ಸಮಾಜ ಕಲ್ಯಾಣ ಇಲಾಖೆಗೆ** ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ಸದರಿ ಸಲ್ಲಿಕೆ ಬಗ್ಗೆ ಸ್ವೀಕೃತಿ ಪಡೆದು ಅದನ್ನು ಇ ಟೆಂಡರಿನಲ್ಲಿ **Upload ಮಾಡಬೇಕು.**

D. **ಟೆಂಡರುದಾರರ ಸರಾಸರಿ ವಹಿವಾಟು ಸಂಬಂಧ, ಟೆಂಡರ್ ಕರೆಯುವ ಹಿಂದಿನ ಐದು ಆರ್ಥಿಕ ಸಾಲುಗಳ ಪೈಕಿ ಯಾವುದಾದರೂ ಎರಡು ಆರ್ಥಿಕ ಸಾಲುಗಳಲ್ಲಿ ಹಾಲಿ ಟೆಂಡರಿಗಿಟ್ಟ ಒಟ್ಟು ಮೌಲ್ಯದ ವಹಿವಾಟನ್ನು ಸದರಿ ಆಹಾರ ಸಾಮಗ್ರಿಗಳ ಸರಬರಾಜಿನಲ್ಲಿಯೇ ಹೊಂದಿರುವುದು ಕಡ್ಡಾಯವಾಗಿರುತ್ತದೆ.**

E. ಟೆಂಡರುದಾರರು ಕಡ್ಡಾಯವಾಗಿ FSSAI ರವರಿಂದ ಪಡೆದ ಹಾಗೂ ಚಾಲ್ತಿಯಲ್ಲಿರುವ ಪರವಾನಗಿಯನ್ನು ಹೊಂದಿರಬೇಕು. ಇದು ಕಡ್ಡಾಯ ದಾಖಲೆಯಾಗಿರುತ್ತದೆ. FSSAI ಪರವಾನಗಿ ಹೊಂದಿರದೇ ಇರುವ ಟೆಂಡರುದಾರರು ಬಿಡ್ ಸಲ್ಲಿಸಲು ಅವಕಾಶವಿಲ್ಲ.

**F. ಟೆಂಡರುದಾರರ ಸೇವಾ ಅನುಭವ ಸಂಬಂಧ, ಟೆಂಡರ್ ಕರೆದ ಹಿಂದಿನ ಮೂರು ಆರ್ಥಿಕ ಸಾಲುಗಳಲ್ಲಿ** ಕನಿಷ್ಠ 03 (ಮೂರು) ವರ್ಷಗಳಿಗಿಂತ ಹೆಚ್ಚು ಅವಧಿಗೆ **ಸರ್ಕಾರಿ, ಅರೆ ಸರ್ಕಾರಿ, ಸ್ವಾಯತ್ತ ಸಂಸ್ಥೆಗಳಿಗೆ ಟೆಂಡರ್‌ನಲ್ಲಿ ಸೂಚಿಸಿದ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಿರುವ ಸಂಬಂಧ ತೃಪ್ತಿಕರ ಪ್ರಮಾಣಪತ್ರ ಪಡೆದು ಇ-ಟೆಂಡರಿನಲ್ಲಿ Upload ಮಾಡುವುದು ಕಡ್ಡಾಯ ದಾಖಲೆಯಾಗಿರುತ್ತದೆ.**

G. ಯಶಸ್ವಿ ಟೆಂಡರುದಾರರು ಕಾರ್ಯಾದೇಶ ಪಡೆದ 10 ದಿನಗಳೊಳಗಾಗಿ ಟೆಂಡರಿಗಿಟ್ಟ ಮೊತ್ತದ ಶೇ 5 ರಷ್ಟು ಮೊತ್ತಕ್ಕೆ Performance Security

ಅನ್ನು ಯಾವುದೇ Scheduled Commercial Bank ನಿಂದ ಪಡೆದು ಸಲ್ಲಿಸಬೇಕು.

H. ಯಶಸ್ವಿ ಟೆಂಡರುದಾರರು ತಮ್ಮ ಸ್ವಂತ ಖರ್ಚಿನಲ್ಲಿಯೇ ಕಾರ್ಯಾದೇಶದಲ್ಲಿ ಸೂಚಿಸಿದ ದಿನಾಂಕಗಳಂದು ಎಲ್ಲಾ ಸಾಮಗ್ರಿಗಳನ್ನು ನಿಲಯದ ಬಾಗಿಲಿಯೇ, ಸಂಬಂಧಪಟ್ಟ ನಿಲಯದ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳ ಸಮಿತಿ ಸಮ್ಮುಖ (Mess Committee) ಪದಾರ್ಥಗಳನ್ನು ಸರಬರಾಜು ಮಾಡಬೇಕು ಹಾಗೂ ಈ ಸಂಬಂಧ GPS ಛಾಯಾಚಿತ್ರಗಳನ್ನು ಬಿಲ್ಲಿನೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕು.

7. <u>**ಟೆಂಡರ್ ಆಹ್ವಾನಿಸುವ ಹಾಗೂ ಮೌಲ್ಯಮಾಪನ ವಿಧಾನ**</u>

a. **ಆಹಾರ ಸಾಮಗ್ರಿಗಳ ಸಂಬಂಧ ಆಯಾಯ ಜಿಲ್ಲಾ ವ್ಯಾಪ್ತಿಯ ಎಲ್ಲಾ ವಸತಿ ಶಾಲೆ ಹಾಗೂ ವಿದ್ಯಾರ್ಥಿನಿಲಯಗಳಿಗೆ 2 ವರ್ಷಗಳ ಅವಧಿಗೆ** ಅವಶ್ಯವಾಗಿರುವ ಎಲ್ಲಾ ಆಹಾರ ಪದಾರ್ಥಗಳ ಪ್ರಮಾಣವನ್ನು ಒಟ್ಟುಗೂಡಿಸಿ, ಬೇಕಾಗಿರುವ ಒಟ್ಟು ಪ್ರಮಾಣಕ್ಕೆ ಟೆಂಡರ್ ಆಹ್ವಾನಿಸುವುದು.

b. **ಸದರಿ ಆಹಾರ ಟೆಂಡರ್ ಅನ್ನು ಕಡ್ಡಾಯವಾಗಿ Two Cover System ಮೂಲಕ ಕರೆಯುವುದು**

c. **ತಾಂತ್ರಿಕ ಬಿಡ್ ನಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕಾದ ದಾಖಲೆಗಳು**

| ಕ್ರ. ಸಂ | ದಾಖಲೆ |
|---|---|
| 1 | ಸಂಸ್ಥೆಯ PAN ಸಂಖ್ಯೆ. ಒಂದು ವೇಳೆ ಸಂಸ್ಥೆಯು Proprietor ಸಂಸ್ಥೆ ಆಗಿದ್ದಲ್ಲಿ, ಮಾಲಿಕರ PAN |
| 2 | ಸಂಸ್ಥೆಯ GST ಪರವಾನಗಿ |
| 3 | ಸಂಸ್ಥೆಯು GST ಅಡಿ ನೊಂದಾಯಿಸಿರುವ ಶಾಖಾ ಕಛೇರಿಗಳ ವಿವರ |
| 4 | ಸಂಸ್ಥೆಯು ಕೇಂದ್ರ ಕಛೇರಿ (Head Office) ಸೇರಿದಂತೆ ಶಾಖಾ ಕಛೇರಿಗಳ (Branch Office) ಸಂಬಂಧ ನಗರ ಸ್ಥಳೀಯ ಸಂಸ್ಥೆಗಳಿಂದ ಪಡೆದ ವಾಣಿಜ್ಯ ಪರವಾನಗಿ ಪತ್ರ |
| 5 | ಟೆಂಡರಿಗಿಟ್ಟ ಹಿಂದಿನ ಐದು ಆರ್ಥಿಕ ಸಾಲುಗಳ ಸಂಬಂಧ ವರ್ಷವಾರು ವಹಿವಾಟು ಪ್ರಮಾಣಪತ್ರ. ಸದರಿ ವಹಿವಾಟು ಕಡ್ಡಾಯವಾಗಿ ಆಹಾರ ಸಾಮಗ್ರಿಗಳ ಸರಬರಾಜು ಮಾತ್ರ ಇರಬೇಕು ಹಾಗೂ ಟೆಂಡರುದಾರರು ನಡೆಸುತ್ತಿರುವ ಇತರೆ Business ವಹಿವಾಟನ್ನು ನಮೂದಿಸುವಂತಿಲ್ಲ ಹಾಗೂ ಒಂದುವೇಳೆ ಅಂತಹ ವಹಿವಾಟು ನಮೂದಿಸಿದಲ್ಲಿ, ಅಂತಹ ಬಿಡ್ ಅನ್ನು ತಿರಸ್ಕರಿಸಲಾಗುವುದು.<br>ಸದರಿ ಪ್ರಮಾಣ ಪತ್ರ CA ರವದಿಂದ ದೃಡೀಕರಿಸಿರಬೇಕು ಹಾಗೂ ಇದೇ ಟೆಂಡರ್ ಸಂಬಂಧ ಪಡೆದಿರಬೇಕು ಅಂದರೆ ಟೆಂಡರ್ ಆಹ್ವಾನಿಸಿದ ನಂತರದ ದಿನಾಂಕದಿಂದ ಟೆಂಡರ್ ಸಲ್ಲಿಸಲು ನಿಗದಿಪಡಿಸಿರುವ ಅಂತಿಮ ದಿನಾಂಕದ ಒಳಗೆ ಇರಬೇಕು ಹಾಗೂ CA ರವರು UDIN ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.<br><br>ಟೆಂಡರುದಾರರ ಸರಾಸರಿ ವಹಿವಾಟು ಸಂಬಂಧ, ಟೆಂಡರ್ ಕರೆಯುವ **ಹಿಂದಿನ ಐದು ಆರ್ಥಿಕ ಸಾಲುಗಳ ಪೈಕಿ ಯಾವುದಾದರೂ ಎರಡು ಆರ್ಥಿಕ** |

| | |
|---|---|
| | ಸಾಲುಗಳಲ್ಲಿ ಹಾಲಿ ಟೆಂಡರಿಗಿಟ್ಟ ಒಟ್ಟು ಮೌಲ್ಯದ ವಹಿವಾಟನ್ನು ಸದರಿ ಆಹಾರ ಸಾಮಗ್ರಿಗಳ ಸರಬರಾಜಿನಲ್ಲಿಯೇ ಹೊಂದಿರುವುದು ಕಡ್ಡಾಯವಾಗಿರುತ್ತದೆ. |
| 6 | ಟೆಂಡರುದಾರ ಸಂಸ್ಥೆಯು ಟೆಂಡರ್ ಆಹ್ವಾನ ಮಾಡಿರುವ ಮಾಹೆಯ ಹಿಂದಿನ ಮಾಹೆಯವರೆಗೂ GST ಮಾಹೆಯಾನ ಅಥವಾ ತ್ರೈಮಾಸಿಕ ವರದಿಗಳನ್ನು ನಿಯಮಿತವಾಗಿ ಸಲ್ಲಿಸಿರಬೇಕು. ಈ ಬಗ್ಗೆ GST Returns File ಮಾಡಿರುವ ಬಗ್ಗೆ Recent Returns ಗಳನ್ನು ಸಲ್ಲಿಸಬೇಕು. |
| 7 | ಟೆಂಡರುದಾರ ಸಂಸ್ಥೆಯು ಟೆಂಡರ್ ಕರೆದ ಆರ್ಥಿಕ ಸಾಲಿನ ಹಿಂದಿನ ಮೂರು ಆರ್ಥಿಕ ಸಾಲುಗಳಲ್ಲಿ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ Income Tax Returns (ITR-V). |
| 8 | ಟೆಂಡರುದಾರ ಸಂಸ್ಥೆಯು ಟೆಂಡರ್ ಕರೆದ ಆರ್ಥಿಕ ಸಾಲಿನ ಹಿಂದಿನ ಮೂರು ಆರ್ಥಿಕ ಸಾಲುಗಳಲ್ಲಿ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ CA Certified Online Submitted 3CA/3CB/3CD ಹಾಗೂ ಸದರಿ ದಾಖಲೆಗಳು ಕಡ್ಡಾಯವಾಗಿ ಆದಾಯ ತೆರಿಗೆ ಇಲಾಖೆಯ ತಂತ್ರಾಂಶದ ಮೂಲಕ Download ಆಗಿರಬೇಕು ಮತ್ತು ಪ್ರತಿ ದಾಖಲೆ ವಿಶೇಷ ಸಂಖ್ಯೆಯನ್ನು ಹೊಂದಿರಬೇಕು. Manual ಆಗಿ CA ರವರು ನೀಡಿದ ವರದಿಗಳನ್ನು ಪರಿಗಣಿಸುವುದಿಲ್ಲ. |
| 9 | ಟೆಂಡರುದಾರ ಸಂಸ್ಥೆಯು FSSAI ರವರಿಂದ ಪಡೆದಿರುವ ಹಾಗೂ ಚಾಲ್ತಿಯಲ್ಲಿರುವ ಪ್ರಮಾಣ ಪತ್ರ. |
| 10 | ಟೆಂಡರುದಾರರು APMC ರವರಿಂದ ಪಡೆದ ಸನ್ನದು ಪ್ರಮಾಣ ಪತ್ರ. |
| 11 | ಟೆಂಡರುದಾರರು ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ಪಡೆದ ಸತ್ಯಾಪನಾ ಪ್ರಮಾಣ ಪತ್ರ. |
| 12 | ಟೆಂಡರುದಾರರ ಸೇವಾ ಅನುಭವ ಸಂಬಂಧ, ಟೆಂಡರ್ ಕರೆದ ಆರ್ಥಿಕ ಸಾಲಿನ ಹಿಂದಿನ **ಮೂರು ಆರ್ಥಿಕ** ಸಾಲುಗಳಲ್ಲಿ ಸರ್ಕಾರಿ, ಅರೆ ಸರ್ಕಾರಿ, ಸ್ವಾಯತ್ತ ಸಂಸ್ಥೆಗಳಿಗೆ ಟೆಂಡರ್‌ನಲ್ಲಿ ಸೂಚಿಸಿದ ಆಹಾರ ಪದಾರ್ಥಗಳನ್ನು ಸಂಪೂರ್ಣವಾಗಿ ಸರಬರಾಜು ಮಾಡಿರುವ ಸಂಬಂಧ ತೃಪ್ತಿಕರ ಪ್ರಮಾಣಪತ್ರ. |
| 13 | ಟೆಂಡರುದಾರ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸದೇ ಇರುವ ಬಗ್ಗೆ ನೋಟರೀ ರವರಿಂದ ದೃಢೀಕರಿಸಿದ ಪ್ರಮಾಣ ಪತ್ರ (Affidavit). |
| 14 | Samples ಗಳನ್ನು ಟೆಂಡರ್ ಆಹ್ವಾನ ಪ್ರಾಧಿಕಾರವಾದ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಜಂಟಿ / ಉಪನಿರ್ದೇಶಕರಿಗೆ ಸಲ್ಲಿಸಿದ ಬಗ್ಗೆ ಸ್ವೀಕೃತಿ. |

d. ಮೇಲ್ಕಂಡ ಕಡ್ಡಾಯ ದಾಖಲೆಗಳನ್ನು ಹೊರತುಪಡಿಸಿ, ಜಿಲ್ಲಾ ಟೆಂಡರ್ ಸಮಿತಿಯು ಇತರೆ ದಾಖಲೆಗಳನ್ನು ಸಹ ಕಡ್ಡಾಯ ದಾಖಲೆಗಳು ಎಂದು ಪರಿಗಣಿಸಿಲು ಅಧಿಕಾರ ಹೊಂದಿರುತ್ತದೆ.
e. EMD ವಿನಾಯಿತಿ ಪಡೆಯುವ ಸಂಬಂಧ ಟೆಂಡರುದಾರರು ಆಹಾರ ಸಾಮಗ್ರಿಗಳ ಸರಬರಾಜಿಗೆ ಮಾತ್ರ ಸಂಬಂಧಿಸಿದಂತೆ NSIC ರವರಿಂದ ಪಡೆದ ಅಧಿಕೃತ ಪ್ರಮಾಣ ಪತ್ರವನ್ನು ಮಾತ್ರ ಪರಿಗಣಿಸಲಾಗುವುದು.
f. ನಿಲಯಕ್ಕೆ ಅವಶ್ಯವಾಗಿರುವ LPG ಅನ್ನು ನೇರವಾಗಿ ಆಯಾಯ ಸರಬರಾಜು ಏಜೆನ್ಸಿಗೆ K2 ಮುಖಾಂತರ ವೆಚ್ಚವನ್ನು ಪಾವತಿ ಮಾಡಲು ತಾಲ್ಲೂಕು ಮಟ್ಟದ ಅಧಿಕಾರಿಗಳು ಕ್ರಮವಹಿಸುವುದು.
g. ಆಸಕ್ತ ಟೆಂಡರುದಾರರು ಎಲ್ಲಾ ಗ್ರೂಪ್ ಗಳಿಗೂ ಸಹ ಕಡ್ಡಾಯವಾಗಿ ಬಿಡ್ ಮಾಡಬೇಕು.

h. **ಟೆಂಡರ್ ಬುಲೆಟಿನ್‌ನಲ್ಲಿ ಮಾರುಕಟ್ಟೆ ದರಗಳನ್ನು** ಪ್ರಕಟಿಸುವಂತಿಲ್ಲ. ಮುಂದುವರೆದು ಆರ್ಥಿಕ ಬಿಡ್ ಅನ್ನು ತೆರದ ನಂತರದಲ್ಲಿ ಮಾರುಕಟ್ಟೆ ದರಗಳಿಗೆ ತಾಳೆಯಾಗುವ ದರಗಳನ್ನು ನಮೂದಿಸಿರುವ ಬಿಡ್‌ದಾರರನ್ನು ಆರ್ಥಿಕ ಬಿಡ್ **ಮೌಲ್ಯಮಾಪನಕ್ಕೆ ಪರಿಗಣಿಸುವುದು.** ಮಾರುಕಟ್ಟೆಯ ದರಗಳ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಸಮಿತಿಯು ಈ ಸಂಬಂಧ ಕೆಳಕಂಡಂತೆ ಕ್ರಮವಹಿಸುವುದು.

| | |
|---|---|
| a | ಸದರಿ ಸಮಿತಿಯು APMC ಸೇರಿದಂತೆ ಇತರೆ ಎಲ್ಲಾ ಸಗಟು ಮಾರುಕಟ್ಟೆ, Super Market, More, Metro Cashand Carry, Reliance Mart, ಇತ್ಯಾದಿಗಳಿಂದ ಪ್ರಚಲಿತದಲ್ಲಿರುವ ಮಾರುಕಟ್ಟೆ ದರಗಳನ್ನು ಪಡೆಯುವುದು. |
| b | ನಂತರದ ಸದರಿ ದರಗಳ ಸರಾಸರಿಯನ್ನು ಲೆಕ್ಕಾಚಾರ ಮಾಡಿ ಸರಾಸರಿ ದರ ನಿಗದಿಪಡಿಸುವುದು |
| c | ಸದರಿ ದರಗಳನ್ನು ಟೆಂಡರ್ ಕರೆಯುವ ಪೂರ್ವದಲ್ಲಿಯೇ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಅಂತಿಮಗೊಳಿಸಿ, ಮುಚ್ಚಿದ ಲಕೋಟೆಯಲ್ಲಿ ಮೊಹರು ಮಾಡಿ ಜಿಲ್ಲಾಧಿಕಾರಿಗಳ ಅಥವಾ ಜಿಲ್ಲಾಧಿಕಾರಿಗಳು ಸೂಚಸಿದ ಅಧಿಕಾರಿಗಳ ಸುಪರ್ದಿಯಲ್ಲಿ ಇಟ್ಟಿರಬೇಕು. |
| d | ಸದರಿ ದರಗಳನ್ವಯ ನಮೂದಿಸಲಾದ Bid ಗಳನ್ನು ಮಾತ್ರ ಪರಿಗಣಿಸಿ, L1 ಅನ್ನು ಆಯ್ಕೆ ಮಾಡುವುದು. |
| e | ಒಟ್ಟಾರೆಯಾಗಿ, Group-A ಇಂದ Group-H ವರೆಗೆ ಇಲಾಖೆ ಪ್ರಕಟಿಸಿದ ಮಾರುಕಟ್ಟೆ ದರಗಳಿಗೆ ಶೇ +/- 15% ಮಿತಿಯೊಳಗೆ ಇರುವ ಬಿಡ್ ಅನ್ನು ಪರಿಗಣಿಸುವುದು. ಇನ್ನುಳಿದವುಗಳನ್ನು ತಿರಸ್ಕರಿಸಲಾಗುವುದು. |

j. ಈ ಕೆಳಗಿನಂತೆ ಸರಬರಾಜು Frequency ಅನ್ನು ನಿಗದಿಪಡಿಸುವುದು:

| | | |
|---|---|---|
| 1 | ಗ್ರೂಪ್-**ಎ** ಪದಾರ್ಥಗಳು | ಪ್ರತಿ ಮಾಹೆಯ 5 ನೇ ತಾರೀಖಿನೊಳಗೆ |
| 2 | ಗ್ರೂಪ್-**ಬಿ** ಪದಾರ್ಥಗಳು | ಪ್ರತಿ ಮಾಹೆಯ 5 ನೇ ತಾರೀಖಿನೊಳಗೆ |
| 3 | ಗ್ರೂಪ್-**ಸಿ** ಪದಾರ್ಥಗಳು | ವಾರಕ್ಕೆ ಎರಡು ಬಾರಿ. ಪ್ರತಿ ಭಾನುವಾರ ಮತ್ತು ಬುಧವಾರ |
| 4 | ಗ್ರೂಪ್-**ಡಿ** ಪದಾರ್ಥಗಳು | ಪ್ರತಿ ದಿನ |
| 5 | ಗ್ರೂಪ್-**ಇ** ಮತ್ತು ಗ್ರೂಪ್-**ಎಫ್** ಪದಾರ್ಥಗಳು | ಮೆನು ಚಾರ್ಟಿನಲ್ಲಿ ನಿಗದಿಪಸಿರುವಂತೆ, ವಿತರಣೆ ಮಾಡುವ ದಿನದಂದೇ ಸರಬರಾಜು ಮಾಡುವುದು |
| 6 | ಗ್ರೂಪ್-**ಜಿ** ಮತ್ತು ಹೆಚ್ ಪದಾರ್ಥಗಳು | ಬೇಡಿಕೆಯಂತೆ |
| 7 | ಗ್ರೂಪ್-**ಐ** ಪದಾರ್ಥಗಳು | ಪ್ರತಿ ಮಾಹೆಯ 5 ನೇ ತಾರೀಖಿನೊಳಗೆ |

**k. ಜಿಲ್ಲಾ ಮಟ್ಟದಲ್ಲಿ ಟೆಂಡರ್ ಅನ್ನು ಅಂತಿಮಗೊಳಿಸುವಾಗ ಸ್ಥಳೀಯ ವಹಿವಾಟುದಾರರಿಗೆ ಆದ್ಯತೆ ನೀಡುವುದು. ಸ್ಥಳೀಯ ವಹಿವಾಟುದಾರ ಅಂದರೆ ಬಿಡ್ ಸಲ್ಲಿಸಿರುವ ಸಂಸ್ಥೆಯು, ಬಿಡ್**

ಸಲ್ಲಿಸಿದ ಜಿಲ್ಲೆಯ ಸಂಬಂಧ, ಸದರಿ ಜಿಲ್ಲಾ ವ್ಯಾಪ್ತಿಯ ಯಾವುದಾದರೂ ತಾಲ್ಲೂಕಿನಲ್ಲಿ **GST** ಅಡಿ ನೊಂದಾಯಿಸಿದ ತನ್ನ ಕೇಂದ್ರ ಕಛೇರಿ ಅಥವಾ ಶಾಖಾ ಕಛೇರಿ ಹೊಂದಿರಬೇಕು **ಹಾಗೂ** ಸದರಿ ಜಿಲ್ಲಾ ವ್ಯಾಪ್ತಿಯ ಯಾವುದಾದರೂ ತಾಲ್ಲೂಕಿನಲ್ಲಿ ವಾಣಿಜ್ಯ ಮಳಿಗೆ ಹೊಂದಿರುವ ಬಗ್ಗೆ ನಗರ ಸ್ಥಳೀಯ ಸಂಸ್ಥೆಗಳಿಂದ ಚಾಲ್ತಿಯಲ್ಲಿರುವ ವಾಣಿಜ್ಯ ಪರವಾನಗಿ ಹೊಂದಿರಬೇಕು. **ಅಂತಹ ಸಂಸ್ಥೆಯನ್ನು ಮಾತ್ರ ಸ್ಥಳೀಯ ವಹಿವಾಟುದಾರ ಎಂದು ಪರಿಗಣಿಸಲಾಗುವುದು.**

l. **ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಸರ್ಕಾರಿ ವಸತಿ ನಿಲಯಗಳನ್ನು ಒಟ್ಟುಗೂಡಿಸಿ, ಬೇಕಾಗಿರುವ ಆಹಾರ ಪದಾರ್ಥಗಳು ಹಾಗೂ ಇತರೇ ಸಾಮಗ್ರಿಗಳ ಪ್ರಮಾಣವನ್ನು (ಪರಿಮಾಣ) ಐಟಂವಾರು ಲೆಕ್ಕ ಹಾಕಿ ಆಯಾಯ ಜಿಲ್ಲೆಯನ್ನು ಘಟಕವನ್ನಾಗಿ ಪರಿಗಣಿಸಿ ಒಂದೇ ಟೆಂಡರ್ ಕರೆಯುವುದು.**

m. ಪಡಿತರ ದರಗಳಲ್ಲಿ ಪಡೆಯಲಾಗುವ ಅಕ್ಕಿ ಮತ್ತು ಗೋಧಿಯನ್ನು ಭಾರತೀಯ ಆಹಾರ ನಿಗಮದ ಗೋದಾಮುಗಳಿಂದ ಯಶಸ್ವಿ ಟೆಂಡರ್‌ದಾರರೇ ಮಾಹೆಯಾನ ಎತ್ತುವಳಿ ಮಾಡಿ ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡತಕ್ಕದ್ದು, ಈ ಎತ್ತುವಳಿ ಸಂಬಂಧ ಸಾಗಾಣಿಕಾ ವೆಚ್ಚವನ್ನು ಮಾತ್ರ ಸರಬರಾಜುದಾರರಿಗೆ ನೀಡುವುದು.

n. **ಅದೇ ರೀತಿ, LPG ಸಂಬಂಧ ಸಿಲೆಂಡರ್ ವೆಚ್ಚವನ್ನು ನೇರವಾಗಿ ಖಜಾನೆ ಮೂಲಕವೇ Agnecy ರವರಿಗೆ ಪಾವತಿಸಬೇಕಿರುತ್ತದೆ. ಕೇವಲ ಪ್ರತಿ ಸಿಲೆಂಡರ್ ಸಾಗಾಣಿಕಾ ವೆಚ್ಚವನ್ನು ಮಾತ್ರ ಟೆಂಡರ್ ನಲ್ಲಿ ಅನುಮೋದಿತ ದರಗಳಂತೆ ಯಶಸ್ವಿ ಟೆಂಡರುದಾರರೇ ಭರಿಸಬೇಕು ತದನಂತರದಲ್ಲಿ ಈ ಸಂಬಂಧ ಮಾಹೆಯಾನ ಬಿಲ್ ಸಲ್ಲಿಸಿ, ಇಲಾಖೆಯಿಂದ ಮರುಪಾವತಿ ಮಾಡಿಸಿಕೊಳ್ಳಬೇಕು.**

o. **ಮೌಲ್ಯಮಾಪನ ಸಂಬಂಧ ಈ ಕೆಳಕಂಡಂತೆ ಕ್ರಮವಹಿಸುವುದು:**

   a. **ಅಂತಿಮವಾಗಿ ಒಟ್ಟಾರೆ ಮಾರುಕಟ್ಟೆ ದರಗಳಿಗೆ ಶೇ - 15% ದರಗಳ ಮಿತಿಯೊಳಗೆ ನಮೂದಿಸರುವ ಬಿಡ್ ದಾರರನ್ನು L-1 ಎಂದು ಪರಿಗಣಿಸುವುದು.**

   b. **ಒಂದು ವೇಳೆ ಒಂದಕ್ಕಿಂತ ಹೆಚ್ಚು ಬಿಡ್ ದಾರರು L-1** ಆಗಿದ್ದಲ್ಲಿ ಅದೇ ಜಿಲ್ಲೆಯಲ್ಲಿ ವಾಣಿಜ್ಯ ವಹಿವಾಟು ನಡೆಸುತ್ತಿರುವ ಹಾಗೂ ಅದೇ ಜಿಲ್ಲೆಯಲ್ಲಿ, GST ಅಡಿ ನೊಂದಾಯಿತ ಕೇಂದ್ರ ಕಛೇರಿ/ ಶಾಖಾ ಕಛೇರಿ ಹೊಂದಿದ್ದು, ಸ್ಥಳೀಯ ಸಂಸ್ಥೆಗಳಿಂದ ಚಾಲ್ತಿಯಲ್ಲಿರುವ ವಾಣಿಜ್ಯ ಪರವಾನಗಿ ಹೊಂದಿದ್ದಲ್ಲಿ, ಅಂತಹ ಬಿಡ್ ದಾರರನ್ನು ಸ್ಥಳೀಯ ಟೆಂಡರುದಾರ ಎಂದು ಪರಿಗಣಿಸಿ ಅಂತಹವನ್ನು L-1 ಎಂದು ಪರಿಗಣಿಸುವುದು.

   c. **ಒಂದು ವೇಳೆ ಒಂದಕ್ಕಿಂತ ಹೆಚ್ಚು ಸ್ಥಳೀಯ ಟೆಂಡರುದಾರರು L-1 ಆಗಿದ್ದಲ್ಲಿ, ಆ ಸ್ಥಳೀಯ ಟೆಂಡರುದಾರರ ಪೈಕಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ**

ಸಮಿತಿಯು ಪಾರದರ್ಶಕತೆಯೊಂದಿಗೆ ಲಾಟರಿ ಮೂಲಕ ಎಲ್-1 ಅನ್ನು ಅಂತಿಮಗೊಳಿಸುವುದು.

d. ಟೆಂಡರ್ ಅನುಮೋದನಾ ಪ್ರಾಧಿಕಾರವಾದ ಜಿಲ್ಲಾಧಿಕಾರಿಗಳು, ಆರ್ಥಿಕ ಬಿಡ್ ಅನುಮೋದನೆ ಸಂಬಂಧ ವಿತ್ತೀಯ ಅಧಿಕಾರಗಳ ಪ್ರತ್ಯಾಯೋಜನ ಆದೇಶದಲ್ಲಿ ಕಾಲಾಕಾಲಕ್ಕೆ ಅಧಿಸೂಚಿಸುವಂತೆ **Diet Items** ಅಡಿಯಲ್ಲಿ, ಇಲಾಖೆಯ ಆಹಾರ ಪದಾರ್ಥಗಳ ಟೆಂಡರುಗಳಿಗೆ ತಮ್ಮ ಹಂತದಲ್ಲಿಯೇ ಅನುಮೋದನೆ ನೀಡತಕ್ಕದ್ದು.

8. ಒಂದು ವೇಳೆ ಸದರಿ ಟೆಂಡರಿನಲ್ಲಿ, ಸರ್ಕಾರಿ ಸ್ವಾಮ್ಯದ ಸಹಕಾರಿ ಸಂಸ್ಥೆಗಳು ಭಾಗವಹಿಸಿ L-1 ಆಗಿದ್ದಲ್ಲಿ (ಉದಾಹರಣೆಗೆ KSCCF, NCCF, Kendriya Bhandar, ಇವೇ ಮೊದಲಾದ), ಅಂತಹ ಸರ್ಕಾರಿ ಸಹಕಾರಿ ಸಂಸ್ಥೆಯು ತಾನು ಪಡೆದ ಕಾರ್ಯಾದೇಶವನ್ನು ಯಾವುದೇ ಕಾರಣಕ್ಕೂ ಉಪಗುತ್ತಿಗೆ ನೀಡುವಂತಿಲ್ಲ ಹಾಗೂ ತನ್ನ empaneled ಸಂಸ್ಥೆಗಳ ಮೂಲಕ ಸರಬರಾಜು ಕಾರ್ಯ ಮಾಡದೇ ಸಂಸ್ಥೆಯೇ ತನ್ನ ಸ್ವಂತ ಮೂಲದಿಂದ ಸರಬರಾಜು ಮಾಡತಕ್ಕದ್ದು. ಈ ಬಗ್ಗೆ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ, ಯಾವುದೇ ಮುನ್ಸೂಚನೆ ನೀಡದೇ, ಸದರಿ ಕಾರ್ಯದೇಶವನ್ನು ರದ್ದುಗೊಳಿಸಿ, ಕಪ್ಪು ಪಟ್ಟಿಗೆ ಸೇರಿಸಲು ಕ್ರಮವಹಿಸುವುದು.
9. ಟೆಂಡರ್ ಸಂಬಂಧಪಟ್ಟಂತೆ ಯಾವುದೇ ಟೆಂಡರುದಾರರು ಮತ್ತು ಇಲಾಖೆಯ ನಡುವೆ ವ್ಯಾಜ್ಯಗಳಿದ್ದಲ್ಲಿ ಆಯಾಯ ಜಿಲ್ಲಾಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಇತ್ಯರ್ಥಪಡಿಸಿಕೊಳ್ಳುವುದು.

30/10

(ಎಲ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ